ಕುಮಾರವ್ಯಾಸನ ಕೆಲವು ಪದ್ಯಗಳನ್ನು ನಾವು ಯಾಕೆ ಓದಬಾರದು? ಅಥವಾ ರಾತ್ರಿ ಬನ್ನಿ! ಸಿದ್ಧಲಿಂಗಯ್ಯ, ಸೋಮಣ್ಣ, ಮಹಾಬಲಮೂರ್ತಿಯೂ ಬರುತ್ತಾರೆ. ಸ್ವಲ್ಪ ಸಮಯ ಸಾಹಿತ್ಯ ಚಿಂತನೆಯಲ್ಲಿ ಒಟ್ಟಿಗೆ ಕಳೆಯುವಾ!

ಮೂರ್ತಿ ನೀವು ಮಕ್ಕಳಿಗಾಗಿ ಸಾಹಸ ಪ್ರಧಾನ ಕಾದಂಬರಿಗಳನ್ನು ಯಾಕೆ ಬರೆಯಬಾರದು? ನಾಡಿಗರೇ ನೀವೇ ಬರೆಯಬಹುದಲ್ಲ! ನಾಡಿಗರು – ಹಲ್ಲು ಕಚ್ಚಿ ನಾನು ಬರೆಯುತ್ತಿರುವೆನೆಂದೇ ನಿಮಗೆ ಹೇಳಿದ್ದು! ಆಮೇಲೆ ಗಟ್ಟಿಯಾದ ಅಟ್ಟಹಾಸದ ಮುಗ್ಧ ಮಗುವಿನ ನಗು. ನಾಡಿಗರ ಒತ್ತಾಯದಿಂದ ನಾನು ಬರೆದದ್ದು 'ಅಮಾನುಷರು' ಕಾದಂಬರಿ! ಹೀಗೆ ಎಷ್ಟು ಜನರಿಂದ ಎಷ್ಟು ಕೃತಿಗಳನ್ನು ಅವರು ಬರೆಸಿದ್ದಾರೋ! ಅವರು ಬರೆದ 'ಸಾಹಸ' ನಾನು ಬರೆದ 'ಅಮಾನುಷರು' ಎರಡೂ ಸುಧಾ ಕಾದಂಬರಿ ಸ್ಪರ್ಧೆಯಲ್ಲಿ ಬಹುಮಾನ ಪಡೆದವು! ಬೇರೆಯವರ ಸಾಹಿತ್ಯಕ ಕೆಲಸಗಳನ್ನು ತಮ್ಮವೇ ಎಂಬಂತೆ ನಾಡಿಗರು ಹಚ್ಚಿಕೊಂಡು ಮಾಡುತ್ತಾ ಇದ್ದರು. ಸರೀಕರ ಬೆಳವಣಿಗೆಯಲ್ಲಿ ಪಾಲುದಾರರಾಗಿ ಅದು ತಮ್ಮದೇ ಬೆಳವಣಿಗೆ ಎನ್ನುವಂತೆ ಸಂಭ್ರಮಿಸುತ್ತಿದ್ದರು!

ವಿಪರೀತ ಮೆಚ್ಚುಗೆ ಮಾತುಗಳು ಬೇರೆ ಲೇಖಕರ ಬಗ್ಗೆ ಬಂದಾಗ ನಾಡಿಗರಿಗೆ ಅದು ಇಷ್ಟವಾಗುತ್ತಿರಲಿಲ್ಲ. ವಿಮರ್ಶೆ ಯಾವಾಗಲೂ ನಿಷ್ಠುರವಾಗಿರಬೇಕು. ಲೇಖಕರನ್ನು ಬೆಳೆಸುವಂತಿರಬೇಕು. ಅವರನ್ನು ಹೊಗಳಿ ಅಡ್ಡ ದಾರಿ ಹಿಡಿಸುವುದು ಸರಿಯಲ್ಲ ಎಂಬುದು ನಾಡಿಗರ ವಿಚಾರ. ನನ್ನ 'ಒಣಮರದ ಗಿಳಿಗಳು' ಸಂಗ್ರಹವನ್ನು ಮುನ್ನುಡಿಯಲ್ಲಿ ಕೀರ್ತಿನಾಥ ಕುರ್ತಕೋಟಿ ತುಂಬ ಇಷ್ಟಪಟ್ಟು ಶ್ಲಾಘಿಸಿದ್ದರು. ನಾಡಿಗರು ರಿವ್ಯೂ ಬರೆದರು! ನನ್ನ ಕವಿತೆಗಳನ್ನು ಸೀಳಿಹಾಕಿದರು. ಜೊತೆಗೆ ಕುರ್ತಕೋಟಿಯವರ ಮುನ್ನುಡಿಯನ್ನೂ!

ಇಂಥ ಭಿನಾಭಿಪ್ರಾಯಗಳು ನಮ್ಮ ಸ್ನೇಹವನ್ನು ಕೆಡಿಸಲಿಲ್ಲ ಎನ್ನುವುದು ನನಗೆ ಅಚ್ಚರಿಯ ವಿಷಯ. ನಾನು ಅವರ ವಿಮರ್ಶಾ ಬರಹಗಳನ್ನು ಟೀಕಿಸಿ ಬರೆದಾಗ ಅದನ್ನು ನಾಡಿಗರು ಸ್ವಲ್ಪವೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಹೀಗೆ ಬರೆಯುವುದೇ ನನಗೆ ಇಷ್ಟ! ಎಂದರು. ಅದು ನಾಡಿಗರ ಸ್ವಭಾವ.

ಕಾವ್ಯ, ಕಥೆ, ಕಾದಂಬರಿ, ವಿಮರ್ಶೆ ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ನಾಡಿಗ ಕೆಲಸ ಮಾಡಿದರು. ಅವರ ಕಾವ್ಯ ನನಗೆ ಪ್ರಿಯವಾದದ್ದು. ವಿಮರ್ಶೆ ಸಾಮಾನ್ಯವಾಗಿ ಒಪ್ಪಿಗೆಯಾಗುತ್ತಿರಲಿಲ್ಲ. ಅಲ್ಲಿ ತರ್ಕವೇ ಮುಖ್ಯವಾಗುತ್ತಿತ್ತು. ಆದರೆ ಕಾವ್ಯದಲ್ಲಿ ಲಾಜಿಕ್ಕನ್ನು ಧಿಕ್ಕರಿಸಿ ಯಾವುದೋ ಮ್ಯಾಜಿಕ್ಕಿನತ್ತ ಅವರ ಬರವಣಿಗೆ ಚಲಿಸುತ್ತಿತ್ತು. ಅವರ 'ಕಪ್ಪುದೇವತೆ' ಎಂಬ ಕವಿತೆ ನನಗೆ ಬಹು ಪ್ರಿಯವಾದದ್ದು. ಅದನ್ನು ಕನ್ನಡದ ಅತ್ಯುತ್ತಮ ಕವಿತೆಗಳಲ್ಲಿ ಒಂದು ಎಂಬುದಾಗಿ ನಾನು ಭಾವಿಸುತ್ತೇನೆ.

ಸಣ್ಣ ಸಂಗತಿಗಳಲ್ಲಿ ನಾಡಿಗರಿಗೆ ತೃಪ್ತಿಯಿಲ್ಲ. ನಾಲ್ವೇ ಸುಖಮಸ್ತಿ ಎನ್ನುವುದು ಅವರ ಜೀವನ ಸೂತ್ರ; ಕಾವ್ಯ ಸೂತ್ರ. ದಾಂಪತ್ಯಗೀತೆ, ಬೇಂದ್ರೆಯ ಸಖೀಗೀತವನ್ನು ಎದುರು ಹಾಕಿಕೊಂಡು ನಾಡಿಗರು ರಚಿಸಿದ ಒಂದು ಮಹತ್ವಾಂಕಾಂಕ್ಷೆಯ ದೀರ್ಘ ಕವಿತೆ. ಅಂತರಂಗವನ್ನು, ಸ್ವಾನುಭವವನ್ನು ಎಳೆ ಎಳೆಯಾಗಿ ನಿರ್ಮಮವಾಗಿ ಅದರಲ್ಲಿ ಬಿಡಿಸಿಡುತ್ತಾರೆ. ಕೆಲವು ಭಾಗ ನೀರಸ ಗದ್ಯದಂತೆ ಇದ್ದರೆ, ಕೆಲವುಭಾಗ ರಸವತ್ತಾದ ಉತ್ಕೃಷ್ಟ ಕಾವ್ಯ. ಆನಂತರ 'ಪಂಚಭೂತಗಳು' ಎನ್ನುವ ಇನ್ನೊಂದು ಮಹತ್ವಾಕಾಂಕ್ಷೆಯ ದೀರ್ಘಕಾವ್ಯವನ್ನು ನಾಡಿಗರು ಬರೆದರು. ಈ ಎರಡು ಕೃತಿಗಳ ಬಗ್ಗೆ ನಾನು ವಿವರವಾಗಿ ಬರೆದಿದ್ದೇನೆ. ಅವರ 'ದಾಂಪತ್ಯಗೀತೆ'